OS No. 93/2018
DW-1

**(ಇಂದು ದಿಃ 17-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**<u>ಮುಂದುವರೆದ ಪಾಟೀ ಸವಾಲುಃ- ಪ್ರತಿವಾದಿ ಪರ ಶ್ರೀ. NR ವಕೀಲರಿಂದಃ-</u>**

ನನ್ನ ತಂದೆ ಮೂಲತಃ ಕೊಡ್ಲಾದವರು, ಅಲ್ಲಿ ಅವರ ಮನೆ ಅಡ್ಡ ಹೆಸರು ಶಹಾಪೂರ ಎಂದು ಇತ್ತು. ನನ್ನ ತಾಯಿ ಮದುವೆ ಆದ ನಂತರ ಬೆನಕಳ್ಳಿಗೆ ಬಂದರು ಎಂದರೆ ಸರಿ. ಅದಕ್ಕಿಂತ ಮುಂಚೆ ಬೆನಕನಳ್ಳಿಯಲ್ಲಿ ನನ್ನ ತಂದೆಗೆ ಸೇರಿದ ಜಮೀನುಗಳು ಇದ್ದವು. ಮನೆ ಇರಲಿಲ್ಲ, ನನ್ನ ತಂದೆಗೆ ಕೊಡ್ಲಾಗ್ರಾಮದ ಶಹಾಪೂರ ಮನೆತನದ ಹಿರಿಯರಿಂದ ಬಂದ ಜಮೀನುಗಳು ಇದ್ದವು ಎಂದರೆ ಸರಿ. ಬೆನಕನಳ್ಳಿಯಲ್ಲಿನ ಮನೆ ನನ್ನ ಮುತ್ತ್ಯಾನಿಗೆ ಸೇರಿದ್ದು ಎಂದರೆ ಮುಂಚೆ ಅಲ್ಲಿ ನನ್ನ ಮುತ್ತ್ಯಾನಿಗೆ ಸೇರಿದ್ದ ಚಿಕ್ಕ ಮನೆ ಇತ್ತು ನಾವು ಅದನ್ನು ಕೆಡುವಿ ಹೊಸ ಮನೆ ಕಟ್ಟಿದ್ದೇವೆ ಎಂದು ಹೇಳುತ್ತಾರೆ. ಸದರಿ ಮನೆ ಕಟ್ಟಿದ ಜಾಗ ನನ್ನ ಮುತ್ತ್ಯಾನಿಗೆ ಸೇರಿದ್ದು ಎಂದರೆ ಸರಿ.

ಈರಪ್ಪ ಮಾಡಿಕೊಟ್ಟಿದ್ದಾರೆ ಇನ್ನಲಾದ ದಾನಪತ್ರದ ಬಗ್ಗೆ ನಾನು ಈ ದಾವೆಯಲ್ಲಿ ಸದರಿ ದಾನ ಪತ್ರವನ್ನು ಹಾಜರುಪಡಿಸುವರೆಗೆ ಅದರ ಬಗ್ಗೆ 1ನೇ ವಾದಿಗೆ ಮತ್ತು ಬೇರೆಯಾರಿಗೂ ಗೊತ್ತಿರಲಿಲ್ಲ ಎಂದರೆ ನನಗೆ ಗೊತ್ತಿತ್ತು ಎಂದು ಹೇಳುತ್ತಾರೆ. ದಾನ ಪತ್ರದಬಗ್ಗೆ ವಾದಿ ಮಹಾದೇವಮ್ಮನಿಗೆ ಗೊತ್ತಿತ್ತು ಎಂದು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಸುಳ್ಳು ಹೇಳಿ ಬರೆಸಿದ್ದೇನೆ ಎಂದರೆ ಸರಿಯಲ್ಲ. ಮಹಾದೇವಮ್ಮಳ ಬಗ್ಗೆ ನನ್ನ ತಾಯಿಗೆ ಎಲ್ಲಾ ಮಾಹಿತಿ ಇತ್ತು ಎಂದರೆ ಸರಿಯಲ್ಲ. ಬಸಲಿಂಗಮ್ಮ ತನ್ನ ಪ್ರತಿವವಾದ ಪತ್ರದಲ್ಲಿ ಬರೆಸಿರುವ ಸಂಗತಿಗಳು ನನಗೆ ಗೊತ್ತು. ಸದರಿ ಪ್ರತಿವಾದ ಪತ್ರದಲ್ಲಿ ಬಸಲಿಂಗಮ್ಮ ಮಹಾದೇವಮ್ಮ ನನ್ನ ತಂಗಿಯೆಂದು ಒಪ್ಪಿ ಕೊಂಡಿದ್ದಾರೆ ಎಂದರೆ ಒಪ್ಪಿ ಕೊಂಡಿದ್ದು ನಿಜ ಆದರೆ ಆಬಗ್ಗೆ ದಾಖಲಾತಿ ಇಲ್ಲ ಎಂದು ಹೇಳುತ್ತಾರೆ. ಮಹಾದೇವಮ್ಮ ನನ್ನ ತಂಗಿಯೆಂದು ಬಸಲಿಂಗಮ್ಮ ಒಪ್ಪಿ ಕೊಂಡಿದ್ದರು ಕೂಡ ಮಹಾದೇವಮ್ಮಳಿಗೆ ಮತ್ತು ಅವಳ ವಾರಸುದಾರರಿಗೆ ಭಾಗ ಕೊಡಬಾರದು ಎಂಬ ಉದದೇಶದಿಂದ ಮಹಾದೇವಮ್ಮ ಬಸಲಿಂಗಮ್ಮಳ ತಂಗಿ ಅಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಹೆಸರು ಕೆಲವು ಕಡೆ ಈರಪ್ಪ ಶಹಾಪೂರ ಮತ್ತು ಕೆಲವು ಕಡೆ ಈರಪ್ಪ ಒಲ್ಲಬರೆಡ್ಡಿ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಈರಪ್ಪ ಒಲ್ಲಬರೆಡ್ಡಿ ಎಂದು ಈದೆ ಆದರೆ ಯಾವುದೇ ದಾಖಲಾತಿಗಳಲ್ಲಿ

ಈರಪ್ಪ ಶಹಾಪೂರ ಇಲ್ಲ ಎಂದು ಹೇಳುತ್ತಾರೆ. ಅಯ್ಯಪ್ಪ ಸಿದ್ದಪ್ಪ ಶಹಾಪೂರ ಎಂದರೆ ನನ್ನ ತಂದೆ. ಅವರ ಹೆಸರು ಅಯ್ಯಪ್ಪ ಸಿದ್ದಪ್ಪ ಶಹಾಪೂರ ಎಂದು ಕೊಡ್ಲಾ ಗ್ರಾಮದ ಸರ್ವೆ ನಂಬರ 123 ರ ಕಂದಾಯ ದಾಖಲಾತಿಗಳಲ್ಲಿ ಇತ್ತು ಎಂದರೆ ಸರಿ. ಸಮಾನ್ಯವಾಗಿ ಯಾವುದೇ ತಂದೆ ತನಗೆ ಇಬ್ಬರು ಮಕ್ಕಳಿದ್ದಾಗ ಒಬ್ಬರೆ ಇದ್ದರೆ ಎಂದು ಬರೆವುದಿಲ್ಲ ಎಂದರೆ ಸರಿ. ದಾನ ಪತ್ರದಲ್ಲಿ ಈರಪ್ಪ ತನಗೆ ಒಬ್ಬಳೆ ಮಗಳು ಎಂದು ಬರೆದಿರುವುದನ್ನು ನೋಡಿದರೆ ಸದರಿ ದಾನ ಪತ್ರವನ್ನು ಈರಪ್ಪ ಬರೆದುಕೊಟ್ಟಿಲ್ಲ ಎಂದು ತಿಳಿದುಬರುತ್ತದೆ ಎಂದರೆ ಸರಿಯಲ್ಲ, ಮಾರ್ಚ ಕೊನೆಯಲ್ಲಿ ದಾನ ಪತ್ರವನ್ನು ಸೇರ್ಪಡೆ ಮಾಡಿದ್ದಾರೆ ಎಂದರೆ ಸರಿಯಲ್ಲ, ದಿಃ 23-03-1956 ರಂದು ಈರಪ್ಪ ದಾನಪತ್ರ ನೋಂದಣಿ ಮಾಡಿಕೊಟ್ಟಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈರಪ್ಪ ತೀರಿಹೋದ ನಂತರ ನಾಮಕವಾಸ್ತೆ ಬಸಲಿಂಗಮ್ಮಳ ಹೆಸರಿಗೆ ಪಹಣಿಗಳು ಆದವು ಎಂದರೆ ಸರಿಯಲ್ಲ, ಈರಪ್ಪ 1953-54 ರಲ್ಲಿ ತೀರಿಹೋಗಿದ್ದಾರೆ. ಈರಪ್ಪ ತೀರಿಹೋದಗ ಅವರ ಹೆಂಡತಿ ನಿಂಗಮ್ಮ ಬದುಕಿದ್ದರು. ಈರಪ್ಪ ತೀರಿಹೋದ ನಂತರ ನಿಂಗಮ್ಮ 20 ವರ್ಷ ಬದುಕಿದ್ದಳು. ಈರಪ್ಪನಿಗೆ 42 ಎಕರೆ ಜಮೀನು ಇತ್ತು. ಸದರಿ 42 ಎಕರೆಯನ್ನು ಈರಪ್ಪ ಸಂಪಾದನೆ ಮಾಡಿದ್ದ. ಈರಪ್ಪ 42 ಎಕೆರೆ ಜಮೀನು ಖರೀದಿ ಮಡಿದ ಬಗ್ಗೆ ದಾಖಲಾತಿ ಹಾಜರುಪಡಿಸಿದ್ದೇನೆ. ಆರೀತಿ ಯಾವುದೇದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ, ಈರಪ್ಪ 42 ಎಕೆರೆ ಜಮೀನನ್ನು ಸ್ವಂತ ಸಂಪಾದನೆಯಿಂದ ಸ್ವಯಾರ್ಜಿತವಾಗಿ ಸಂಪಾದನೆ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ಹಿಂದೂ ಉತ್ತರಾಧಿಕಾರಿ ಕಾಯ್ದೆ 1956ಜಾರಿಗೆ ಬರುವ ಮುಂಚೆ ದಾನ ಪತ್ರ ಮಾಡಿಕೊಟ್ಟಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ದಾವಾ ಜಮೀನಗಳು ಮಹಾದೇಮ್ಮ ಮತ್ತು ಬಸಲಿಂಗಮ್ಮ ಇಬ್ಬರ ಸ್ವಾಧಿನದಲ್ಲಿ ಇದ್ದವು ಎಂದರೆ ಸರಿಯಲ್ಲ, ಈ ದಾವೆ ಕಾಲಪರಿಮೀತಿ ಮೀರದ ದಾವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

OS No. 93/2018
DW-1

ಕೊಡ್ಲಾದಲ್ಲಿ ನನ್ನ ತಂದೆಗೆ ಆತನ ತಂದೆಯಿಂದ ಬಂದ ಮನೆಯನ್ನು ನನ್ನ ತಂದೆ ಮಾರಾಟ ಮಾಡಿದ್ದರು ಎಂದರೆ ಸರಿ. ಮಹಾದೇವಮ್ಮಳಿಗೆ ಭಾಗ ಕೊಡಬಾರದು ಎಂಬ ಕಾರಣಕ್ಕೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(7 ರಿಂದ 10ನೇ ಪ್ರತಿವಾದಿಗಳ ಪರ ಶ್ರೀ VJM ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.)**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**